# ಜಾದೂಯಿ ಪಿಟಾರಾ | ಆರಂಭಿಕ ಬಾಲ್ಯದಲ್ಲಿ ಆಟದ ಚಮತ್ಕಾರ

ಉಮಾ ಮಹೇಶ್ವರ ರಾವ್ ಜಗ್ಗೇನ

ಲವಲವಿಕೆಯಿಂದ ತುಂಬಿದ ಹಳ್ಳಿಯೊಂದರಲ್ಲಿ, ಅಂಗನವಾಡಿಯ ಹತ್ತಿರ, ಬೇರೆಬೇರೆ ರೂಪದ ಆಟಗಳಲ್ಲಿ ಉಲ್ಲಾಸಭರಿತರಾಗಿ ತೊಡಗಿಸಿಕೊಂಡ ಮಕ್ಕಳ ಗುಂಪುಗಳೊಂದಿಗೆ ಒಂದು ಸಂಜೆಯು ಅನಾವರಣಗೊಳ್ಳುತ್ತದೆ. ಶಿಕ್ಷಕರು ಅವರ ಸಾಮಾಜಿಕ ಪಾಲ್ಗೊಳ್ಳುವಿಕೆಯನ್ನು ಗಮನಿಸಿ ಸಂತೋಷಪಡುತ್ತಾರೆ. ಪ್ಲಾಸ್ಟಿಕ್ ಲೋಟಗಳಂತಹ ವಸ್ತುಗಳ ಜೊತೆ – ಬೇರೆಬೇರೆ ರೀತಿಗಳ ಆಟಗಳು; ಮಣ್ಣಿನಿಂದ ಬೇರೆಬೇರೆ ಆಕೃತಿಗಳನ್ನು ಮಾಡಿ ಆಡುವ ಸಾಂಕೇತಿಕ ಆಟ; ಲಗೋರಿಯಂತಹ ನಿಯಮಬದ್ಧ ಆಟಗಳು; ಮಕ್ಕಳ ಗುಂಪೊಂದು "ಗಣಪತಿ ಮೆರವಣಿಗೆ" ಹೊರಡುವಂತೆ ಆಡುತ್ತಿರುವ ಸಮಾಜೋ–ನಾಟಕೀಯ ಆಟ; ಅಲ್ಲದೆ ಕುಪ್ಪಳಿಸುವುದು, ನೆಗೆಯುವುದು ಮತ್ತು ಓಡುವಂತಹ ದೈಹಿಕ ಆಟ – ಇವೆಲ್ಲವೂ ನಿಶ್ಚಿತವಾಗಿಯೂ ಮಕ್ಕಳ ಕಲ್ಪನಾಶಕ್ತಿಯ ಸಮೃದ್ಧತೆ ಮತ್ತು ಸ್ಥಳೀಯ ಸಂಪ್ರದಾಯಗಳೊಡನೆ ಅವರ ಸಂಬಂಧಗಳನ್ನು ಪ್ರದರ್ಶಿಸುತ್ತವೆ. ಈ ಸನ್ನಿವೇಶವು ಚಮತ್ಕಾರಿಕವಾದುದು(ಜಾದೂಯಿ). ಎಳೆಯ ಮಕ್ಕಳ ಒಟ್ಟಾರೆ ಕಲಿಕೆಯ ಅನುಭವದ ಮೂಲ ಗುಣಮಟ್ಟವು ಆರೈಕೆದಾರರು ಮತ್ತು ಶಿಕ್ಷಕರು ತಮ್ಮ ತರಗತಿಗಳಲ್ಲಿ ಸಾಮಗ್ರಿಗಳನ್ನು ಹೇಗೆ ಬಳಸಿಕೊಳ್ಳುತ್ತಾರೆ ಮತ್ತು ಮಕ್ಕಳು ಪರಸ್ಪರ ಹೇಗೆ ಸಂವಹಿಸುತ್ತಾರೆ ಎಂಬುದರಿಂದ ಬಹಳ ಪ್ರಭಾವಿತಗೊಳ್ಳುತ್ತದೆ. ಆಟ–ಆಧಾರಿತ ಕಲಿಕೆಯಲ್ಲಿ ಸಾಮಗ್ರಿಗಳು ಮತ್ತು ವಯಸ್ಕರ ಪಾತ್ರ ನಿರ್ಣಾಯಕವಾದುದು. ಕುತೂಹಲದಿಂದ, ಮಕ್ಕಳು ತಮ್ಮ ಕಲ್ಪನಾಶಕ್ತಿಯನ್ನು ಆಧರಿಸಿ ವಸ್ತುಗಳನ್ನು ಅನ್ವೇಷಿಸಿ ಮತ್ತು ಸಾಮಗ್ರಿಗಳನ್ನು ಬಳಸಿ, ನೋಡಲು ಸಂಬಂಧವಿಲ್ಲದಂತೆ ಕಾಣುವ ವಸ್ತುಗಳನ್ನು ಅರ್ಥಪೂರ್ಣ ಆಟದ ಅಂಶಗಳನ್ನಾಗಿ ಪರಿವರ್ತಿಸುತ್ತಾರೆ.

## ಜಾದೂ ಪೆಟ್ಟಿಗೆ

ಎನ್.ಸಿ.ಎಫ್–ಎಫ್.ಎಸ್.ನಿಂದ ಅಭಿವೃದ್ಧಿಪಡಿಸಲಾದ ಜಾದೂಯಿ ಪಿಟಾರಾ (ಜಾದೂ ಪೆಟ್ಟಿಗೆ) 3ರಿಂದ 8 ವರ್ಷದವರೆಗಿನ ಮಕ್ಕಳಿಗೋಸ್ಕರ ಮಾಡಿಸಿದಂಥ ಆಟ–ಆಧಾರಿತ ಕಲಿಸುವ–ಕಲಿಯುವ ಸಾಮಗ್ರಿಗಳುಳ್ಳ (teaching-learning materials (TLMs)) ಒಂದು ಪೆಟ್ಟಿಗೆಯಾಗಿದೆ. ಇದು "ಆಟದ ಮೂಲಕ ಕಲಿಕೆ"ಗೆ ಇಂಬು ಕೊಡುತ್ತದೆ ಮತ್ತು 13 ಭಾರತೀಯ ಭಾಷೆಗಳಲ್ಲಿ ಇದು ಲಭ್ಯವಿದೆ. ಇದು ಭಾರತೀಯ ಮಕ್ಕಳಿಗೆ ಸಾಂಸ್ಕೃತಿಕ ಮತ್ತು ಸಾಂದರ್ಭಿಕ ಪ್ರಾಮುಖ್ಯತೆಯನ್ನು ಹೊಂದಿದೆ. ಬುನಾದಿ ಹಂತದಲ್ಲಿ ರಾಜ್ಯದ ಪಠ್ಯಕ್ರಮ ಚೌಕಟ್ಟು ಮತ್ತು ಪಾಠಕ್ರಮದ ಜೊತೆಗೆ ಸಾಂಸ್ಕೃತಿಕ ಮತ್ತು ಸಾಂದರ್ಭಿಕ ಪ್ರಸ್ತುತತೆಯನ್ನು ಹೊಂದಿದ, ಸಾಂಪ್ರದಾಯಿಕ ಆಟಿಕೆಗಳಿಗೆ ಕೊಡಬೇಕಾದ ಪ್ರಾಮುಖ್ಯತೆಯನ್ನು ಕೊಡುವ ಇಂತಹುದೇ ಸಾಮಗ್ರಿಗಳ ಒಂದು ಗುಂಪನ್ನು ಅಭಿವೃದ್ಧಿಪಡಿಸಲು ರಾಜ್ಯ ಶಿಕ್ಷಣ ಇಲಾಖೆಗಳಿಗೆ ಪ್ರೋತ್ಸಾಹಿಸಲಾಗುತ್ತಿದೆ. ಬುನಾದಿ ಹಂತದಲ್ಲಿ, ಟಿಎಲ್‌ಎಂಗಳು, ಕಲಿಸುವ–ಕಲಿಯುವ ಪ್ರಕ್ರಿಯೆಯನ್ನು ಹೆಚ್ಚು ಸಂವಹನಪೂರ್ಣವಾಗಿ, ಪರಿಣಾಮ–ಕಾರಿಯಾಗಿ ಮತ್ತು ತೊಡಗಿಸಿಕೊಳ್ಳುವಂತೆ ಮಾಡುವಲ್ಲಿ ನಿರ್ಣಾಯಕವಾದ ಪಾತ್ರ ವಹಿಸುತ್ತವೆ. ಇವು ಬಹು–ಸಂವೇದನೆಯುಳ್ಳ, ವಯಸ್ಸಿಗೆ ತಕ್ಕಂಥ ಬೋಧನೆಯೊಂದಿಗೆ ಮತ್ತು ಬೆಳವಣಿಗೆಯ ಕ್ಷೇತ್ರಗಳ ಕಲಿಕಾ ಅನುಭವಗಳು, ಬುನಾದಿಯ ಭಾಷೆ, ಸಾಕ್ಷರತೆ, ಗಣಿತ ಸಮ್ಯಾಜ್ಞಾನ ಮತ್ತು ನಮ್ಮ ಸುತ್ತಲಿನ ಜಗತ್ತಿನ ತಿಳುವಳಿಕೆಯನ್ನು ಒದಗಿಸುವ ಮೂಲಕ ಮಕ್ಕಳ ಬೆಳವಣಿಗೆಯ ಅವಶ್ಯಕತೆಗಳಿಗೆ ಸಹಾಯ ಮಾಡುತ್ತವೆ. ಜಾದೂಯಿ ಪಿಟಾರಾದ ಸಾಮಗ್ರಿಗಳು ಎನ್.ಸಿ.ಎಫ್–ಎಫ್.ಎಸ್.ನ ಪಠ್ಯಕ್ರಮದ ವಿಸ್ತಾರವಾದ ಶ್ರೇಣಿಯುಳ್ಳ ಗುರಿಗಳನ್ನು ಸಾಧಿಸುವ ಕಲಿಸುವ ವಿಧಾನಗಳಿಗೆ ಇಂಬು ಕೊಡುತ್ತವೆ.

## ಜಾದೂಯಿ ಪಿಟಾರಾದ ಸಾಮಗ್ರಿಗಳು

ಹೆಚ್ಚಿನ ಪರಿಣಾಮವುಳ್ಳ ಆಟಿಕೆ ಸಾಮಗ್ರಿಗಳು

ಜಾದೂಯಿ ಪಿಟಾರಾದಲ್ಲಿ ಶೈಕ್ಷಣಿಕ ಕೌಶಲಗಳಿಗಷ್ಟೇ ಅಲ್ಲದೆ ಅವಶ್ಯಕವಾದ ಸಾಮಾಜಿಕ, ಭಾವನಾತ್ಮಕ, ಗ್ರಹಣಶಕ್ತಿಯ ಕೌಶಲ ಮತ್ತು ಸಂವೇದನಾತ್ಮಕ ಮತ್ತು ಪ್ರತ್ಯಕ್ಷ ಸಂಜ್ಞಾನಾತ್ಮಕ ಕೌಶಲಗಳಿಗೂ (sensory and perceptual skills) ಸಹ ಅಡಿಪಾಯವನ್ನು ಹಾಕುವಂತಹ ಕಲಿಕೆಯೆಡೆಗೆ ಕ್ರಿಯಾಶೀಲವಾದ ಮತ್ತು ಬೆಳವಣಿಗೆಗೆ–ಸಮರ್ಪಕವಾದ ವಿಧಾನಕ್ಕೆ (active and developmentally-appropriate approach) ಬೇಕಾಗುವಂತಹ ಆಟಿಕೆಗಳು, ಒಡಪುಗಳು, ಬ್ಲಾಕುಗಳು ಮತ್ತು ತೊಗಲುಗೊಂಬೆಗಳಂತಹ ಆಟಿಕೆಗಳು ಮತ್ತು ಆಟದ ಸಾಮಗ್ರಿಗಳನ್ನು ಹೊಂದಿರುತ್ತದೆ. ಈ ವಸ್ತುಗಳು ಮಕ್ಕಳಿಗೆ ಶಿಕ್ಷಕರ ಸಹಾಯದ ಜೊತೆಗೆ ಅವರ ಪರಿಪಕ್ವತೆಯ ಮಟ್ಟಕ್ಕೆ ಅನುಸಾರವಾಗಿ, ಕಲಿಕೆ ಮತ್ತು ಬೆಳವಣಿಗೆಯ ಅನಂತ ಅವಕಾಶಗಳನ್ನು ಅನುಭವಿಸಿ ಅನ್ವೇಷಿಸಲು ಅನುವು ಮಾಡಿಕೊಡುತ್ತವೆ. ಅವು ಒಂದು ಪ್ರಚೋದಕ ಕಲಿಕೆಯ ಪರಿಸರವನ್ನು (stimulative learning environment) ಖಚಿತಪಡಿಸಿ, ಮಕ್ಕಳಿಗೆ ಆಟದ ಸಾಮಗ್ರಿಗಳನ್ನು ಆಯ್ದುಕೊಂಡು ಅವುಗಳಲ್ಲಿ ಮಗ್ನರಾಗುವ ಸ್ವಾತಂತ್ರ್ಯವನ್ನು ಕೊಡುವುದರ ಮೂಲಕ ತರಗತಿಗಳನ್ನು ಒಂದು ಲವಲವಿಕೆಯ ಅನುಭವಗಳನ್ನಾಗಿ ಮಾಡುತ್ತವೆ.

## ಬಿಲ್ಡಿಂಗ್ ಬ್ಲಾಕುಗಳು ಮತ್ತು ಒಗಟುಗಳು

ಕಟ್ಟುವ ಬ್ಲಾಕುಗಳನ್ನು (Building blocks) ಅವುಗಳ ಮುಕ್ತಾಂತ ಸ್ವರೂಪ (open-ended nature) ಮತ್ತು ರಚನಾತ್ಮಕ ಆಟದ ಅನಂತ ಸಾಧ್ಯತೆಗಳಿಂದಾಗಿ 'ಮಹಾ ಆಟಿಕೆಗಳು' (super toys) ಎಂದು ಕರೆಸಿಕೊಳ್ಳುತ್ತವೆ. ಮಕ್ಕಳು ತಮ್ಮ ಸಂವೇದನೆಗಳನ್ನು ವಸ್ತುಗಳು ಹೇಗೆ ಕೆಲಸ ಮಾಡುತ್ತವೆ ಮತ್ತು ಅವುಗಳನ್ನು ಹೇಗೆಲ್ಲ ಮಾರ್ಪಡಿಸಬಹುದು ಎಂಬುದನ್ನು ಕಂಡುಹಿಡಿಯಲು ಬಳಸುತ್ತಾರಾದ್ದರಿಂದ, ರಚನಾತ್ಮಕ ಆಟವು (constructive play) ಶಾಲಾಪೂರ್ವ ಹಂತದಲ್ಲಿರುವ ಮಗುವೊಂದಕ್ಕೆ ವರ್ಗೀಕರಿಸುವ, ಅಳೆಯುವ, ಕ್ರಮದಲ್ಲಿಡುವ, ಎಣಿಸುವ ಮತ್ತು ಆಳ, ಅಗಲ, ಉದ್ದ, ಸಮ್ಮಿತಿ, ಆಕಾರ ಮತ್ತು ವಲಯಗಳಿಗೆ ಸಂಬಂಧಪಟ್ಟಂತೆ ವ್ಯತ್ಯಾಸಗಳನ್ನು ಪ್ರತ್ಯೇಕಿಸುವ ಕೌಶಲಗಳನ್ನು ಬೆಳೆಸಿಕೊಳ್ಳುವ ಅವಕಾಶಗಳನ್ನು ಒದಗಿಸಿ-ಕೊಡುತ್ತದೆ. ಇದು ಮಕ್ಕಳ ಕಲ್ಪನಾಶಕ್ತಿ ಮತ್ತು ಸೃಜನಶೀಲತೆಗೂ ಸಹಾಯ ಮಾಡುತ್ತದೆ.

## ತೊಗಲುಗೊಂಬೆ ಮತ್ತು ಇತರ ಆಟಿಕೆಗಳು

ಅಡುಗೆ ಮತ್ತು ವೈದ್ಯರ ಆಟದಂಥ ತೊಗಲುಗೊಂಬೆ ಮತ್ತು ಆಟಿಕೆಗಳು, ಮಕ್ಕಳಿಗೆ ಪ್ರತಿನಿಧಿಸುವ ಕೌಶಲ ಅಥವಾ ಒಂದು ವಸ್ತುವನ್ನು ಇನ್ನೊಂದು ವಸ್ತುವಿನಂತೆ ಪ್ರತಿನಿಧಿಸುವ ಕಲ್ಪನಾಶಕ್ತಿಯನ್ನು (ಸಾಮಗ್ರಿಗಳನ್ನು ಬಳಸಿ ಮತ್ತು ಧ್ವನಿಯನ್ನು ಅನುಕರಿಸುವುದರ ಮತ್ತು ಇತರರನ್ನು ಅನುಕರಿಸುವ ಕ್ರಿಯೆಗಳ ಮೂಲಕ ಮಾಡುವ ಸಾಮಾಜಿಕ-ನಾಟಕೀಯ ಆಟ ಮತ್ತು ಪಾತ್ರಾಭಿನಯ) ಬೆಳೆಸಲು, ಭಾಷಾ ಸಾಮರ್ಥ್ಯಗಳನ್ನು, ಸಾಮಾಜಿಕ-ಭಾವನಾತ್ಮಕ ಅರಿವನ್ನು ಸಾಮಾಜಿಕ ಪಾತ್ರಗಳು ಮತ್ತು ರೂಢಿಗಳ ಅರ್ಥ ಮಾಡಿಕೊಳ್ಳುವಿಕೆಯನ್ನು ಪೋಷಿಸಲು, ಅದರ ಮೂಲಕ ಮಕ್ಕಳಿಗೆ ವಾಸ್ತವ ಜಗತ್ತನ್ನು ಅರ್ಥ ಮಾಡಿಕೊಳ್ಳಲು ಮಕ್ಕಳಿಗೆ ಸಹಾಯ ಮಾಡುತ್ತವೆ.

**ಕೋಷ್ಟಕ 1. ಜಾದೂಯಿ ಪಿಟಾರಾದಲ್ಲಿರುವ ಆಟಗಳ ರೂಪಗಳು, ಇಂಬು ಕೊಡುವ ಸಾಮಗ್ರಿಗಳು ಮತ್ತು ಅವುಗಳ ಮಹತ್ತ್ವ**

| ಆಟದ ಬಗೆ | ಜಾದೂಯಿ ಪಿಟಾರಾದಲ್ಲಿನ ಸಾಮಗ್ರಿಗಳು | ಬೆಳವಣಿಗೆಯ ಅವಕಾಶಗಳು, ಕೌಶಲಗಳು ಮತ್ತು ಸಾಮರ್ಥ್ಯಗಳು |
|---|---|---|
| **ವಸ್ತುಗಳೊಡನೆ ಆಟ** | • ಬೆಕ್ಕಿನ ಒಗಟು<br>• 2-3 ಆಯಾಮಗಳ ಆಕಾರಗಳನ್ನು ದಾರದಲ್ಲಿ ಪೋಣಿಸುವುದು<br>• ಬಣ್ಣದ ರಿಂಗುಗಳನ್ನು ಒಂದರ ಮೇಲೆ ಒಂದು ಜೋಡಿಸುವುದು<br>• ರಾಡುಗಳು ಮತ್ತು ಬಣ್ಣದ ಬ್ಲಾಕುಗಳನ್ನು ಒಂದರ ಮೇಲೆ ಒಂದನ್ನು ಜೋಡಿಸುವುದು<br>• ಟ್ಯಾನ್ಗ್ರಾವಮ್<br>• ಗಣಿತ ಮಾಲಾ | • ಸಂವೇದನಾಶೀಲ ಚಾಲನಾ ಕೌಶಲಗಳು, ಸಂವೇದನಾಶೀಲ ಪ್ರತ್ಯಕ್ಷ ಸಂಜ್ಞಾನಾತ್ಮಕ ಕೌಶಲಗಳು<br>• ವಸ್ತುಗಳ ಗುಣಲಕ್ಷಣಗಳನ್ನು ಅನ್ವೇಷಿಸುವುದು<br>• ವರ್ಗೀಕರಿಸುವ, ಅಳೆಯುವ, ಕ್ರಮವಾಗಿಡುವ, ಎಣಿಸುವ ಮತ್ತು ಆಳ, ಅಗಲ, ಉದ್ದ, ಸಮ್ಮಿತಿ, ಆಕಾರ ಮತ್ತು ಅವಕಾಶಗಳಿಗೆ ಅನುಸಾರವಾಗಿ ವ್ಯತ್ಯಾಸಗಳನ್ನು ಸಂಗ್ರಹಿಸುವ ಸಾಮರ್ಥ್ಯ |
| **ನಾಟಕೀಯ ಆಟ** | • ಅಡುಗೆ ಆಟ<br>• ಕುಟ್ಟಣಿಗೆ-ಕಲ್ಲು, ಚಾಕು ಮತ್ತು ಕತ್ತರಿಸುವ ಫಲಕ, ಲಟ್ಟಣಿಗೆ-ಮಣೆ<br>• ಕೈಗೊಂಬೆಗಳು (ದನ, ಹುಲಿ, ಕೋತಿ, ಕೋಳಿ, ಆನೆ, ತಿಮಿಂಗಿಲ) ಮೆತ್ತನೆಯ ಆಟಿಕೆಗಳು, ಸೂತ್ರದ ಗೊಂಬೆ | • ಕಲ್ಪನೆಗಳು, ಭಾವನೆಗಳನ್ನು ಸಂವಹನ ಮಾಡುವುದು<br>• ಸೂಕ್ತ ಸಾಮಾಜಿಕ ಕೌಶಲಗಳು<br>• ಪದಸಂಪತ್ತನ್ನು ಅಭ್ಯಸಿಸಲು ಆತ್ಮವಿಶ್ವಾಸ ಮತ್ತು ಹೊಸ, ಸಂಬಂಧಿತ ಪದಗಳ ಮೂಲಕ ಕಲಿಕೆಯನ್ನು ವಿಸ್ತರಿಸುವುದು<br>• ಓದುವ ಮತ್ತು ಬರೆಯುವ ಕೌಶಲಗಳಿಗೆ ಅಭ್ಯಾಸ<br>• ಸಮಸ್ಯೆಗಳನ್ನು ಪರಿಹರಿಸುವುದು ಮತ್ತು ಗಣಿತದ ಪರಿಕಲ್ಪನೆಗಳನ್ನು ಬೆಳೆಸಿಕೊಳ್ಳುವುದು<br>• ಸಹಪಾಠಿಗಳ ಜೊತೆ ಸಹಕಾರ |
| **ಸಾಂಕೇತಿಕ ಆಟ** | • ಅಕ್ಷರಮಾಲೆಯ ಮೇಲೆ ನಕಲು ಮಾಡುವ ಫಲಕ<br>• ತೊಗಲುಗೊಂಬೆಗಳು | • ಮೌಖಿಕ ಭಾಷೆ, ಓದುವುದು ಮತ್ತು ಬರೆಯುವುದು, ಸಂಖ್ಯೆಗಳು, ವಿವಿಧ ದೃಶ್ಯ ಮಾಧ್ಯಮಗಳು (ವರ್ಣಚಿತ್ರ, ಚಿತ್ರ ಬಿಡಿಸುವುದು, (ಕೊಲಾಜ್ ತೇಪೆ ಚಿತ್ರ) ಸಂಗೀತ ಮುಂತಾದವುಗಳನ್ನು ಒಳಗೊಂಡಂಥ ಸಾಂಕೇತಿಕ ವ್ಯವಸ್ಥೆಗಳು<br>• ಹೊಸ ಪದಗಳನ್ನು ಸೃಷ್ಟಿಸುವುದು ಮತ್ತು ಧ್ವನಿಮಾಶಾಸ್ತ್ರೀಯ ಅರಿವು |

| ಆಟದ ಬಗೆ | ಜಾದೂಯಿ ಪಿಟಾರಾದಲ್ಲಿನ ಸಾಮಗ್ರಿಗಳು | ಬೆಳವಣಿಗೆಯ ಅವಕಾಶಗಳು, ಕೌಶಲಗಳು ಮತ್ತು ಸಾಮರ್ಥ್ಯಗಳು |
|---|---|---|
| ದೈಹಿಕ ಆಟ | • ಮರದ ಬುಗುರಿ<br>• ಆಟದ ಕೃತಕ ಜೇಡಿ ಮಣ್ಣು<br>• ಪೋಣಿಸುವ ಮಣಿಗಳು<br>• ಚೆಂಡು<br>• ಸ್ಕಿಪ್ಪಿಂಗ್ ಹಗ್ಗ<br>• ಲಗೋರಿ | • ದೈಹಿಕ ಯೋಗಕ್ಷೇಮ, ಸ್ಥೂಲ ಮತ್ತು ಸೂಕ್ಷ್ಮ ಚಾಲನಾ ಕೌಶಲಗಳು<br>• ನಿಯಂತ್ರಣ, ಸುಸಂಗತತೆ ಮತ್ತು ದೈಹಿಕ ಸಮತೋಲನ<br>• ಚಲನೆಗಳ ಪರಿಕಲ್ಪನೆಗಳನ್ನು ಅರ್ಥಮಾಡಿಕೊಳ್ಳುವುದು (ದೃಶ್ಯಕ ಮತ್ತು ದೈಹಿಕ ಅಂಗಗಳು) |
| ನಿಯಮಗಳುಳ್ಳ ಆಟ | • ಅಷ್ಟ ಚಂಗ<br>• ಚೌಕಾ ಬಾರ<br>• ಅಳಗುಳಿ ಮಣೆ<br>• ಪರೆಚೀಸಿ | • ಹಂಚಿಕೊಳ್ಳುವುದು, ಸಹಕರಿಸುವುದು ಮತ್ತು ಸೂಕ್ಷ್ಮ ಚಾಲನಾ ಕೌಶಲಗಳಂತಹ, ಸಾಮಾಜಿಕ ಕೌಶಲಗಳ ಶ್ರೇಣಿ<br>• ಇತರರ ದೃಷ್ಟಿಕೋನವನ್ನು ಅರ್ಥಮಾಡಿಕೊಳ್ಳುವುದು<br>• ಸಮಸ್ಯಾ–ಪರಿಹಾರ ಮಾಡುವ ಕೌಶಲಗಳು |

## ಆಟದ ಪುಸ್ತಕಗಳು

ಆಟದ ಪುಸ್ತಕಗಳು 3ರಿಂದ 6 ವರ್ಷದ ಮಕ್ಕಳ ಗುಂಪಿಗೆ ಚಿತ್ರಿತ ವಿಷಯಾಧಾರಿತ ವಸ್ತುವುಳ್ಳ ಚಟುವಟಿಕೆಯ ಹಾಳೆಗಳನ್ನೊಳ–ಗೊಂಡರೆ 3ರಿಂದ 8 ವರ್ಷದ ಮಕ್ಕಳ ಗುಂಪಿಗೆ ಹಿಂದಿ, ಇಂಗ್ಲಿಷ್ ಮತ್ತು ಗಣಿತದ ಸಚಿತ್ರ ಚಟುವಟಿಕೆಗಳನ್ನು ಒಳಗೊಂಡಿರುತ್ತವೆ. ಈ ಆಟದ ಪುಸ್ತಕಗಳು, ಮಕ್ಕಳಿಗೆ ಓದುವುದನ್ನು ಆನಂದಕರವಾಗಿಸುವುದಲ್ಲದೆ:

- ಸಕಾರಾತ್ಮಕ ಕಲಿಕೆಯ ಧೋರಣೆಗಳನ್ನು ಪ್ರಚೋದಿಸುತ್ತವೆ
- ಸ್ವ–ಅನ್ವೇಷಣೆ ಮತ್ತು ಸ್ವತಂತ್ರ ಕಲಿಯುವಿಕೆಯನ್ನು ಪ್ರೋತ್ಸಾಹಿಸುತ್ತವೆ
- ಮುದ್ರಿತ ಪ್ರಾತಿನಿಧ್ಯದ ಮೂಲಕ ಘನವಾದ ಪರಿಕಲ್ಪನೆಗಳನ್ನು ಒದಗಿಸುತ್ತವೆ
- ಜ್ಞಾನಗ್ರಹಣಶೀಲ ಸಾಮರ್ಥ್ಯಗಳು ಮತ್ತು ಸಂಖ್ಯಾ–ಪೂರ್ವ ಮತ್ತು ಸಂಖ್ಯಾ ಪರಿಕಲ್ಪನೆಗಳನ್ನು ಒದಗಿಸುತ್ತವೆ
- ಸೂಕ್ಷ್ಮ ಚಾಲನಾ ಕೌಶಲಗಳನ್ನು ಬೆಳೆಸುತ್ತವೆ, ಸುಸಂಗತ ಕತ್ತರಿಸುವಿಕೆ, ಬಣ್ಣ ಹಚ್ಚುವಿಕೆ, ಪ್ರತಿ ಮಾಡುವಿಕೆಗಳನ್ನು ಪ್ರಚೋದಿಸುತ್ತವೆ.
- ಮುದ್ರಣ ವಿಧಾನದ ಮೂಲಕ ಚಿತ್ರ ಗ್ರಹಣಶೀಲತೆ, ಪದಸಂಪತ್ತು, ಓದುವ ಪೂರ್ವದ ಮತ್ತು ಬರವಣಿಗೆಯ ಕೌಶಲಗಳಿಗೆ ಇಂಬು ಕೊಡುತ್ತವೆ.
- ಸಾಮಾಜಿಕ ಬೆಳವಣಿಗೆಯನ್ನು ಪ್ರಚೋದಿಸಲು ನಡೆಸುವ ತರಗತಿ/ಸಹಪಾಠಿಗಳ ಗುಂಪು/ಗುಂಪು ಚಟುವಟಿಕೆಗಳಲ್ಲಿ ಅನುಭವಿಸುವ ಕೌಶಲಗಳನ್ನು ಮತ್ತು ಪರಿಕಲ್ಪನೆಗಳನ್ನು ಪುನರ್ಬಲನಗೊಳಿಸುತ್ತವೆ ಮತ್ತು ಅಭ್ಯಾಸವನ್ನು ಒದಗಿಸುತ್ತವೆ.
- ವಯಸ್ಸಿಗೆ–ಅನುಗುಣವಾದ, ದರ್ಜೆ ಮಟ್ಟದ ಬುನಾದಿ ಸಾಮರ್ಥ್ಯಗಳಿಂದ ಸರಾಗವಾದ ಪರಿವರ್ತನೆಯನ್ನು ಉತ್ತೇಜಿಸುತ್ತವೆ
- ಈ ಆಟದ ಪುಸ್ತಕಗಳು ಶಿಕ್ಷಕರಿಗೂ ಇತರ ಬಹಳ ರೀತಿಗಳಲ್ಲಿ ಸಹಾಯ ಮಾಡುತ್ತವೆ: ಸಕಾರಾತ್ಮಕ ಕಲಿಕೆಯ ಧೋರಣೆಗಳನ್ನು, ಸಂತೋಷಕರವಾದ ಮತ್ತು ಪ್ರೋತ್ಸಾಹಕರವಾದ ಕಲಿಕೆಯ ಅನುಭವಗಳನ್ನು ನಿರ್ಮಿಸಲು ಶಿಕ್ಷಕರಿಗೆ ಇಂಬು ನೀಡುತ್ತವೆ
- ಭೇದ–ಗ್ರಹಣವುಳ್ಳ ಶಿಕ್ಷಣವನ್ನು ಅನುಕೂಲಗೊಳಿಸಿ ಅದರ ನಿದರ್ಶನವೊಂದನ್ನು ಮುಂದಿಡುತ್ತವೆ, ತಮ್ಮ ವಿದ್ಯಾರ್ಥಿಗಳ ವೇಗ ಮತ್ತು ಕಲಿಕೆಯ ಶೈಲಿಗಳಿಗೆ ಅನುಸಾರವಾಗಿ ಚಟುವಟಿಕೆಯ ಹಾಳೆಗಳನ್ನು ತಯಾರಿಸಲು ಶಿಕ್ಷಕರಿಗೆ ಅನುವು ಮಾಡಿಕೊಡುತ್ತವೆ.
- ಪ್ರತೀ ಮಗುವಿನ ಪ್ರಗತಿಯ ಸ್ಪರ್ಶಗ್ರಾಹ್ಯ ದಾಖಲೆಯನ್ನು ಕಾಪಿಟ್ಟುಕೊಳ್ಳಲು, ಬೆಳವಣಿಗೆಯ ಮೈಲಿಗಲ್ಲುಗಳು ಮತ್ತು ಆರಂಭಿಕ ಕಲಿಕೆಯ ಫಲಿತಾಂಶಗಳ ಲೆಕ್ಕ ಇಡಲು ಅನುಕೂಲ ಮಾಡಿಕೊಡುತ್ತವೆ
- ಕೃತಿಸಂಪುಟದಲ್ಲಿ ಮಕ್ಕಳ ಚಟುವಟಿಕೆಯ ಹಾಳೆಗಳನ್ನು ವ್ಯವಸ್ಥಿತವಾಗಿ ದಾಖಲಿಸಲು ಅನುಕೂಲ ಮಾಡಿಕೊಡುತ್ತವೆ.

ಇದಕ್ಕೆ ಹೊರತಾಗಿ, ಆಟದ ಪುಸ್ತಕಗಳು ಮಕ್ಕಳ ಬೆಳವಣಿಗೆಯಲ್ಲಿ ಪೋಷಕರ ತೊಡಗಿಸಿಕೊಳ್ಳುವಿಕೆಯನ್ನು ಮತ್ತು ಸರಳವಾದ ಸಚಿತ್ರ ಚಟುವಟಿಕೆಯ ಹಾಳೆಗಳಿಂದ ಕಲಿಯಲು ಅನುಕೂಲ ಮಾಡಿ ಪ್ರೋತ್ಸಾಹಿಸುತ್ತವೆ. ಈ ಚಟುವಟಿಕೆಯ ಹಾಳೆಗಳು ಅವರಿಗೆ ತಮ್ಮ ಮಕ್ಕಳ ಪ್ರಗತಿಯ ಬಗೆಗಿನ ಸ್ಪಷ್ಟ ಒಳನೋಟವನ್ನು ಕೊಟ್ಟು ಮನೆಯಲ್ಲಿ ಕಲಿಕೆ ಮುಂದುವರಿಸಲು ಅನುಕೂಲ ಮಾಡಿಕೊಡುತ್ತವೆ.

## ಶಿಕ್ಷಕ ಕೈಪಿಡಿಗಳು

ಆರಂಭಿಕ ಬುನಾದಿ ಹಂತದಲ್ಲಿ (3ರಿಂದ 6 ವರ್ಷದ ಮಕ್ಕಳು), ಮಕ್ಕಳೊಂದಿಗೆ ಬಳಸಬಹುದಾದ ಸಾಮಗ್ರಿಗಳ ಬಗ್ಗೆ ಶಿಕ್ಷಕರಲ್ಲಿ ಸುಮಾರು ಗೊಂದಲವಿದೆ. ಇದನ್ನು ಪರಿಹರಿಸಲು, ಜಾದೂಯಿ

ಪಿಟಾರಾ ಶಿಕ್ಷಕರ ಕೈಪಿಡಿಗಳ ಒಂದು ಕಟ್ಟನ್ನು ಒದಗಿಸುತ್ತದೆ. ಈ ಕೈಪಿಡಿಗಳು ಸ್ಪಷ್ಟವಾಗಿ ವಿಷಯಾಧಾರಿತ ವಸ್ತು ಮತ್ತು ವಯಸ್ಸಿಗೆ-ಸೂಕ್ತವಾದ ಅನುಭವಗಳ ಸಾಧ್ಯತೆಗಳ ರೂಪುರೇಖೆಗಳನ್ನು ತಿಳಿಸುತ್ತವೆ. ಖೇಲ್ ಖೇಲ್ ಮೆ ಕೈಪಿಡಿಯು 3ರಿಂದ 6 ವರ್ಷದ ಮಕ್ಕಳಿಗೆ ನಿರ್ದಿಷ್ಟವಾಗಿ ತಯಾರಿಸಲ್ಪಟ್ಟಿದ್ದು, ಹಿಂದಿ, ಇಂಗ್ಲಿಷ್ ಮತ್ತು ಗಣಿತಕ್ಕೋಸ್ಕರ ಇತರ ಕೈಪಿಡಿಗಳೂ ಇವೆ. ಕಡಿಮೆ ಖರ್ಚು ಅಥವಾ ಖರ್ಚೇ ಇಲ್ಲದೆ ಕಲಿಸುವ-ಕಲಿಯುವ ಸಾಮಗ್ರಿಗಳನ್ನು (TLMs) ತಯಾರಿಸುವುದು ಹೇಗೆ ಎಂಬ ಕೈಪಿಡಿಯನ್ನೂ ಸಹ ದೊರಕಿಸಲಾಗಿದೆ.

## ಫ್ಲ್ಯಾಶ್ ಕಾರ್ಡ್ಸ್ (ಮಿಂಚು ಪಟ್ಟಿಗಳು)

ಈ ಕೆಳಗಿನ ಉದ್ದೇಶಗಳನ್ನು ಪೂರೈಸುವ ಪ್ರಾಣಿಗಳ, ಹೂಗಿಡ ಮತ್ತು ಹಣ್ಣುಗಳು ಇತ್ಯಾದಿ ವಿಷಯವಸ್ತುಗಳುಳ್ಳ 50 ಮಿಂಚು ಪಟ್ಟಿಗಳಿವೆ:

- ತೊಡಗಿಸಿಕೊಳ್ಳುವಿಕೆ ಮತ್ತು ಆಸಕ್ತಿ: ಆಕರ್ಷಕ ದೃಶ್ಯಗಳ ವಿಷಯವಸ್ತುವುಳ್ಳ ಬಗೆಯಲ್ಲಿ ಮಾಹಿತಿಯನ್ನು ಪ್ರಸ್ತುತಪಡಿಸುವ ಮೂಲಕ ಮಕ್ಕಳ ಆಸಕ್ತಿಯನ್ನು ಸೆರೆಹಿಡಿದು ಅದನ್ನು ಕಾಪಿಟ್ಟುಕೊಳ್ಳುವುದು
- ಪರಿಕಲ್ಪನೆಯ ಪುನರ್ಬಲನ: ವಿಷಯವಸ್ತುವುಳ್ಳ ಪರಿಕಲ್ಪನೆಗಳು ಮತ್ತು ಪದಸಂಪತ್ತನ್ನು ಪುನರ್ಬಲನಗೊಳಿಸಿ, ಉತ್ತಮ ಧಾರಣಾಶಕ್ತಿ ಮತ್ತು ಅರ್ಥೈಸುವಿಕೆಯಲ್ಲಿ ಸಹಾಯ ಮಾಡುವುದು
- ಬಹು-ಸಂವೇದನೆಯ ಕಲಿಕೆ: ತಿಳಿವಳಿಕೆಯನ್ನು ಹೆಚ್ಚಿಸಲು ದೃಷ್ಟಿ ಮತ್ತು ಚರ್ಚೆಯನ್ನೊಳಗೊಂಡ ಬಹು-ಸಂವೇದನೆಯ ಕಲಿಕೆಯ ಅನುಭವಗಳನ್ನು ಒದಗಿಸುವುದು
- ಭಾಷಾ ಬೆಳವಣಿಗೆ: ಹೊಸ ಪದಗಳನ್ನು ಪರಿಚಯಿಸುವ ಮತ್ತು ನಿರ್ದಿಷ್ಟ ವಿಷಯವಸ್ತುವಿನ ಮೇಲೆ ಮುಕ್ತ, ಮಾರ್ಗದರ್ಶಿತ, ಪರಿಕಲ್ಪನಾತ್ಮಕ ಸಂಭಾಷಣೆಗಳನ್ನು ನಡೆಸುವ ಮೂಲಕ ಭಾಷಾ ಬೆಳವಣಿಗೆಗೆ ಇಂಬು ಕೊಡುವುದು
- ಸೃಜನಶೀಲತೆ ಮತ್ತು ಕಲ್ಪನಾಶಕ್ತಿ: ವಿಷಯವಸ್ತುವುಳ್ಳ ವಿಚಾರಗಳ ದೃಶ್ಯ ಪ್ರಾತಿನಿಧ್ಯದ ಮೂಲಕ ಸೃಜನಶೀಲತೆ ಮತ್ತು ಕಲ್ಪನಾಶಕ್ತಿಯನ್ನು ಪ್ರೋತ್ಸಾಹಿಸುವುದು

## ಗಣಿತ ಸಂಖ್ಯಾಜ್ಞಾನದ ಕಾರ್ಡುಗಳು

ಸಂಖ್ಯೆಯ ಹೆಸರುಗಳು ಮತ್ತು ಗಣನ ಸಂಖ್ಯೆಗಳ ಚುಕ್ಕೆಗಳನ್ನು ಪ್ರತಿಯೊಂದರಲ್ಲೂ ನಮೂದಿಸಿದ ಗಣಿತ ಸಂಖ್ಯಾಜ್ಞಾನದ ಕಾರ್ಡುಗಳ (1-100) ಎರಡು ಕಟ್ಟುಗಳಿದ್ದು ಈ ಕೆಳಗಿನವಕ್ಕೆ ಸಹಾಯ ಮಾಡುತ್ತವೆ:

- ಗಣಿತ ಸಂಖ್ಯಾಜ್ಞಾನದ ಕೌಶಲದ ಬೆಳವಣಿಗೆ: ಪ್ರಮಾಣಗಳೊಂದಿಗೆ ಸಂಖ್ಯೆಗಳು, ಸಂಖ್ಯೆಗಳ ಹೆಸರುಗಳು ಮತ್ತು ಸಂಬಂಧಪಟ್ಟ ಸಂಖ್ಯೆಗಳ (ಚಿಹ್ನೆಗಳು) ದೃಶ್ಯಿಕ ಪ್ರಾತಿನಿಧ್ಯ
- ಘನವಾದ (ಚಿತ್ರಿತ) ಅರ್ಥ ಮಾಡಿಕೊಳ್ಳುವಿಕೆ: ಅಮೂರ್ತದೊಡನೆ (ಸಂಖ್ಯೆಗಳು) ಘನವಾದ ಚಿಹ್ನೆಗಳನ್ನು (ಚುಕ್ಕೆಗಳು) ಜೋಡಿಸುವುದು
- ಕ್ರಮಾನುಗತ ಕಲಿಕೆ: ಪೂರ್ವ ಪ್ರಾಥಮಿಕದವರಿಗೆ ಮೂಲ ಎಣಿಸುವಿಕೆಯಿಂದ (1-10) ಶುರುಮಾಡಿ ಹೆಚ್ಚು ಸಂಕೀರ್ಣ ಲೆಕ್ಕಗಳಿಗೆ ಪ್ರಗತಿ ಹೊಂದುವುದು
- ಪರಸ್ಪರ ಪರಿಣಾಮ ಬೀರುವ ಕಲಿಕೆ: ಸಂಖ್ಯೆಗಳನ್ನು ಕೈಯಾರೆ ಅನ್ವೇಷಿಸಲು ಪ್ರೋತ್ಸಾಹಿಸುವುದು ಮತ್ತು ಅವುಗಳಿಗೆ ಘನವಾದ ಅನುಭವಗಳೊಂದಿಗೆ ಸಂಬಂಧ ಕಲ್ಪಿಸುವುದು

## ಭಿತ್ತಿಚಿತ್ರಗಳು

- ಭಿತ್ತಿಚಿತ್ರಗಳು ಮುದ್ರಣ-ಸಮೃದ್ಧ ವಾತಾವರಣವನ್ನು ಸೃಷ್ಟಿಸುತ್ತವೆ, ತರಗತಿಯ ಸಂಭಾಷಣೆಗಳಿಗೆ, ಗಟ್ಟಿಯಾಗಿ ಓದುವುದಕ್ಕೆ ಇಂಬು ಕೊಡುತ್ತವೆ ಮತ್ತು ಶಿಕ್ಷಕರ ನೆರವಿನಿಂದ ಈ ಕೆಳಗಿನವುಗಳಿಗೂ ಸಹಾಯ ಮಾಡುತ್ತವೆ: ಮೌಖಿಕ ಭಾಷಾ ಬೆಳವಣಿಗೆ: ಮಾತು, ಸಂಭಾಷಣೆ ಮತ್ತು ಕಲಿಕೆಯನ್ನು ಬಳಸಿಕೊಂಡು ಕೇಳಿಸಿಕೊಳ್ಳುವುದು ಮತ್ತು ಪ್ರತಿಕ್ರಿಯಿಸುವುದು, ಮರುವಾಚಿಸುವುದು
- ಮುದ್ರಣ ಅರಿವು: ಮುದ್ರಿತ ಪದಗಳೊಂದಿಗೆ ಮಾತನಾಡುವ ಭಾಷೆಯ ಸಂಬಂಧ ಕಲ್ಪಿಸುವುದು, ಮೌಖಿಕ ಮತ್ತು ಲಿಖಿತ ಭಾಷೆಯ ನಡುವಿನ ಅಂತರ್‌ಸಂಬಂಧವನ್ನು ಕಾಣುವುದು
- ಸಾಂಸ್ಕೃತಿಕ ಅನುಭವ: ವೈವಿಧ್ಯಮಯ ಕಥೆಗಳು ಮತ್ತು ಕವಿತೆಗಳ ಮೂಲಕ ವಿವಿಧ ಸಂಸ್ಕೃತಿಗಳು, ದೃಷ್ಟಿ-ಕೋನಗಳು ಮತ್ತು ಸಾಹಿತ್ಯಿಕ ಸಂಪ್ರದಾಯಗಳ ಪರಿಚಯ ನೀಡುವುದು
- ಅಭಿವ್ಯಕ್ತಿ ಮತ್ತು ಸಂವಹನ: ಚರ್ಚೆಗಳು ಮತ್ತು ಹಂಚಿಕೊಳ್ಳುವ ಇತರ ರೂಪಗಳನ್ನು ಪ್ರೋತ್ಸಾಹಿಸುವುದು
- ಗ್ರಹಣಶೀಲತೆಯ ಓದುವಿಕೆ: ಚಿತ್ರಗಳನ್ನು ಓದುವುದು, ಪದಗಳನ್ನು ಗುರುತಿಸುವುದು ಮತ್ತು ಓದಿ ಗ್ರಹಿಸುವ ಕೌಶಲಗಳನ್ನು ಕಥೆಗಳು, ಕವಿತೆಗಳು ಮತ್ತು ಜೊತೆಗೂಡಿದ ದೃಶ್ಯಗಳ ಮೂಲಕ ಉತ್ತಮಗೊಳಿಸುವುದು

## ಪರಿಸಮಾಪ್ತಿ

ಶಿಕ್ಷಕರ ಮಾರ್ಗದರ್ಶನದೊಂದಿಗೆ ಮಕ್ಕಳಿಂದ ನಡೆಯುವ ದೈನಂದಿನ ಕಲಿಕೆಯ ಅನುಭವಗಳು, ವಿಷಯವಸ್ತುವುಳ್ಳ ಆಟದ ಸಾಮಗ್ರಿಗಳು, ಸಾಂಕೇತಿಕ ಮತ್ತು ನಾಟಕೀಯ ಆಟದ ಚಟುವಟಿಕೆಗಳೊಂದಿಗೆ ಶಿಕ್ಷಕರು ನಡೆಸುವ ಚಟುವಟಿಕೆಗಳು, ಶಿಕ್ಷಕರ ಕೈಪಿಡಿಗಳು ಮತ್ತು ಶಿಕ್ಷಕರ ಸೂಚನಾ ಪುಸ್ತಕಗಳಂತಹ ಸಂಪನ್ಮೂಲಗಳಿಂದ ಆಧಾರಿತವಾಗಿವೆ. ಈ ವಿಧಾನಕ್ಕೆ ಬುನಾದಿ ಹಂತದಲ್ಲಿ 'ಆಟವಾಡುತ್ತ ಕಲಿಸುವುದು ಮತ್ತು ಕಲಿಯುವುದನ್ನು'



**ಚಿತ್ರ 1. ಜಾದೂಯಿ ಪಿಟಾರದ ಒಳವಸ್ತುಗಳೊಡನೆ ಆಡುತ್ತಾ ಸಂತೋಷಪಡುತ್ತಿರುವ ಒಂದು ಮಗು**

ಉತ್ತೇಜಿಸುವುದೇ ಉದ್ದೇಶವಾಗಿದೆ. ಇದಕ್ಕೆ ಪ್ರತಿಯಾಗಿ, ಇವು ಮಕ್ಕಳಿಗೆ ಪೋಷಿಸಲು ಮತ್ತು ಎಲ್ಲಿ ಸಾಧ್ಯವೋ ಅಲ್ಲಿ ಸ್ಥಳೀಯ ಸಂಪನ್ಮೂಲಗಳನ್ನು ಅಳವಡಿಸಿಕೊಂಡು ಮಕ್ಕಳ ಬದುಕು, ಸಂದರ್ಭ ಮತ್ತು ಹಿಂದಿನ ಜ್ಞಾನಗಳೊಂದಿಗೆ ಗಾಢವಾದ ಸಂಬಂಧವುಳ್ಳ ಅನುಭವಗಳನ್ನು ಯೋಜಿಸಿ ಸಕಾರಾತ್ಮಕ ಸಂಬಂಧಗಳನ್ನು ಬೆಳೆಸುತ್ತವೆ.

---



**ಉಮಾಮಹೇಶ್ವರ ರಾವ್ ಜಗ್ಗೇನ** ಅವರು ಶೈಕ್ಷಣಿಕ, ಮಾರ್ಗದರ್ಶನ, ಪಠ್ಯಕ್ರಮ ಅಭಿವೃದ್ಧಿ, ಮೌಲ್ಯಮಾಪನಗಳು, ನಾಯಕತ್ವ ಮತ್ತು ಕಾರ್ಯಕ್ರಮ ನಿರ್ವಹಣೆಗಳನ್ನೊಳಗೊಂಡು ಅಜೀಂ ಪ್ರೇಮ್‌ಜಿ ಫೌಂಡೇಷನ್‌ನಲ್ಲಿ ಹಲವು ಪಾತ್ರಗಳನ್ನು ವಹಿಸಿದ್ದಾರೆ. ಅವರು ಕಾರ್ಯಕ್ರಮ ಬೆಳವಣಿಗೆ ಮತ್ತು ಅದರ ಕಾರ್ಯಗತಗೊಳಿಸುವಿಕೆಯ ಮೂಲಕ ಅಂಗನವಾಡಿ ಕೇಂದ್ರಗಳು ಮತ್ತು ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣದ (ECCE) ಗುಣಮಟ್ಟವನ್ನು ಹೆಚ್ಚಿಸುವುದರಲ್ಲಿ ವಿಶೇಷಜ್ಞರಾಗಿದ್ದಾರೆ. ಇವರು ಜಾದೂಯಿ ಪಿಟಾರಾ (NCF-FS) ಮತ್ತು ಆರಂಭಿಕ ಕಲಿಕೆಯ ಮೌಲ್ಯಮಾಪನದ ಸಾಧನಗಳಿಗೆ (ELA) ಕೊಡುಗೆ ನೀಡಿದ್ದಾರೆ. ಪುದುಚೆರಿಯಲ್ಲಿನ (UT) ECCE ಕಾರ್ಯಕ್ರಮಗಳು ಮತ್ತು ಹಲವು ರಾಜ್ಯಗಳಲ್ಲಿ ಸಾಮರ್ಥ್ಯ–ನಿರ್ಮಾಣದ ಕಾರ್ಯಕ್ರಮಗಳನ್ನು ಪರಿವರ್ತಿಸುವಲ್ಲಿ ಕಾರಣೀಭೂತರಾಗಿದ್ದಾರೆ. ಜಗ್ಗೇನ ಅವರು NCERT (RIE ಮೈಸೂರು)ಯಿಂದ ಸ್ನಾತಕೋತ್ತರ ಪದವಿಯನ್ನು ಹೊಂದಿದ್ದಾರೆ. ಅವರನ್ನು uma.maheswara@azimpremjifoundation.org ಮೂಲಕ ಸಂಪರ್ಕಿಸಬಹುದು.